ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

''ಕರ್ನಾಟಕ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೬ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—''ಪ್ರಸ್ತಾವ ಏನೆಂದರೆ'' ಕರ್ನಾಟಕ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೬ನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸಂಘಗಳ ನೋಂದಣಿ(ತಿದ್ದು ಪಡಿ)ವಿಧೇಯಕ ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್.ಆರ್. ಬೊಮ್ಮಾಯಿ(ಕಂದಾಯ ಹಾಗೂ ಕಾರ್ಮಿಕ ಯೋಜನಾ ಮಂತ್ರಿ) ಅವರ ಪರವಾಗಿ.—

ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ)ವಿಧೇಯಕ, ೧೯೮೬ ಅನ್ನು ಪರ್ಯಾಲೋಚಿಸಬೇಕಾಗಿ ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್,—ಇದರಲ್ಲಿ ಸೆಕ್ಷನ್ ೭೭ಎ ಪ್ರಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕಂಥ ಅಂಶ ಇದೆ.....

ಒಬ್ಬ ಮಾನ್ಯ ಸದಸ್ಯರು.—ಈ ಬಿಲ್‌ನಲ್ಲಿ ರೆಟ್ರಾಸ್ಪೆಕ್ಟೀವ್ ಕೂಡಾ ಇರಬೇಕೆಂದು ತಂದಿದ್ದೀರಿ. ಆದರೆ ನಾನು ಹೇಳುವುದೇನೆಂದರೆ ಪ್ರಾಸ್ಪೇಕ್ಟಿವ್ ಮಾತ್ರ ಇದ್ದರೆ ಅನುಕೂಲ. ರೆಟ್ರಾಸ್ಪೆಕ್ಟೀವ್ ಬೇಡ ಎಂದು ನನ್ನ ಅಭಿಪ್ರಾಯ.

SRI A. LAKSHMI SAGAR.—When the Legislature has competence to make laws prospectively, it has also the legal competence to to make laws retrospectively. ಇದಕ್ಕೆ ಸುಪ್ರೀಂ ಕೋರ್ಟಿನ ತೀರ್ಮಾನ ಸಹ ಇದೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

ಕರ್ನಾಟಕ ಸಂಘಗಳ ನೋಂದಣಿ(ತಿದ್ದು ಪಡಿ)ವಿಧೇಯಕ, ೧೯೮೬ನ್ನು ಪರ್ಯಾಲೋಚಿಸಂವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸಂವುದು

ಖಂಡ ೨

ಅಧ್ಯಕ್ಷರು.— ''ಖಂಡ ೨ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಮೊದಲನೆಯ ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮವು ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ ೧೯೮೬ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ '' ಕರ್ನಾಟಕ ಸಂಘಗಳ ನೋಂದಣಿ(ತಿದ್ದುಪಡಿ)ವಿಧೇಯಕ, ೧೯೮೬ನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ[ಅರ್ಜನೆ ಮತ್ತು ವರ್ಗಾವಣೆ]ವಿಧೇಯಕ, ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀ ಜೆ.ಹೆಚ್. ಪಟೇಲ್(ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—ಅವರ ಪರವಾಗಿ

'' ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ(ಅರ್ಜನೆ ಮತ್ತು ವರ್ಗಾವಣೆ)ವಿಧೇಯಕ, ೧೯೮೬ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸಭಾ ಅಧ್ಯಕ್ಷರೇ, ಇವತ್ತಿನ ದಿವಸ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ ವಿಧೇಯಕ ಎಂದು ಇದಕ್ಕೆ ಹೆಸರು ಇಟ್ಟು ಸಭೆಯಲ್ಲಿ ಮಂಡನೆ ಮಾಡಿದ್ದಾರೆ, ಆದರೆ ಇದು ಬಟ್ಟೆ ಗಿರಣಿಗಳ ವಿಧೇಯಕ ಅಲ್ಲ, ಬಟ್ಟೆಗಿರಣಿಗಳನ್ನು ಕೊಲ್ಲುವ ವಿಧೇಯಕವೆಂದು ನಾನು ಹೇಳುತ್ತೇನೆ, ಇದನ್ನು ನಾವು ಸ್ವಾಗತಮಾಡುವುದಾದರೂ ಹೇಗೆ ಅಧ್ಯಕ್ಷರೆ ? ಸಹಕಾರ ಸಂಘಗಳು ರಚಿತವಾದ ಮೇಲೆ ಅದರಲ್ಲಿ ಹಲವಾರು ಲೋಪದೋಷಗಳು ಇರಬಹುದು. ಆದರೆ ಸರ್ಕಾರದಲ್ಲೇ ಲೋಪಇತ್ತು ಬೇಕಾದವರ ಕೈಯಲ್ಲಿ ಈ ಗಿರಣಿಯನ್ನು ಕೊಡುವುದರ ಸಲುವಾಗಿ, ಈಗ ಇದನ್ನು ಇದರೊಳಗೆ ತಳ್ಳಿ ಸಹಕಾರಿ ಸಂಘದ ಆಸ್ತಿತ್ವದ ಮೇಲೆ ಗೂಬೆ ಹೊರಿಸುವುದಕ್ಕೆ ಈ ಮೂಲಕ ಹೊರಟಿದ್ದಾರೆ. ಮಾನ್ಯ ಜಾಲಪ್ಪನವರು ಉತ್ತಮವಾಗಿ ಕಾರ್ಯ ಮಾಡುತ್ತಿದ್ದವರು ಇದರಲ್ಲಿ ಅವರು ಏಕೆ ಕೈಹಾಕಲಿಲ್ಲ ? ಜೆ. ಹೆಚ್. ಪಟೇಲರ ಪ್ರಭಾವ ಹೆಚ್ಚಾಯಿತೆಂದು ಜಾಲಪ್ಪನವರು ಮಾಡಲಿಲ್ಲಪ್ಪೋ ಅಥವಾ ಬೊಮ್ಮಾಯಿಯವರ ವಶೀಲಿ ಹೆಚ್ಚಾಯಿತೋ ? ಏಕೆಂದರೆ ಮಹಾರಾಷ್ಟ್ರದಲ್ಲೂ ಅನೇಕ ಸಹಕಾರ ಸಂಘಗಳು ಬಂದ್ ಆಗಿವೆ. ಆದರೆ ಅವುಗಳನ್ನು ಆಲ್ ಇಂಡಿಯಾ ಮಿಲ್ ಫೆಡರೇಷನ್‌ನವರು ಓಡಿಸುತ್ತಾ